<u>ಎಸ್ ಸಿ ನಂ. 10004/2024</u>

ಪ್ರಾ.ಸಾ. 17
ಚಾ.ಸಾ. 30

**<u>ಸಾಕ್ಷಿಯನ್ನು ದಿನಾಂಕ 20.12.2025 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು</u>**

| | |
|---|---|
| ಸಾಕ್ಷಿದಾರರ ಹೆಸರು | ಡಾ.ಪೂಜಿತ ಬಿ ಕೆ |
| ಗಂಡನ ಹೆಸರು | ಭವನ್ |
| ವಯಸ್ಸು | 32 ವರ್ಷ |
| ಉದ್ಯೋಗ | ವೈದ್ಯಾಧಿಕಾರಿ, ಮಣಿಪಾಲ್ ಆಸ್ಪತ್ರೆ, ಡಿ.ಬಿ ಪುರ |
| ವಾಸ | ವಿಜಿಪುರ, ದೇವನಹಳ್ಳಿ ತಾಃ |

<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ</u>

1. ನಾನು ಜನವರಿ 2021 ಇಲ್ಲಿಯವರೆಗೆ ಮಣಿಪಾಲ್ ಆಸ್ಪತ್ರೆ ದೊಡ್ಡಬಳ್ಳಾಪುರದಲ್ಲಿ ವೈದ್ಯಾಧಿಕಾರಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕ 12.04.2023 ರಂದು ಬೆಳಿಗಿನ ಜಾವ 4-09 ಗಂಟೆ ಸಮಯಕ್ಕೆ ಮತ್ತೆ ಜೆನಿಲಾ ಜೋಬಿ ರವರು, ಆಕೆಯ ಗಂಡ ಶಾಮ್ ಮರಿಯಾದಾಸ್, ಅತ್ತೆ ಶೇಲಿನ್ ಮೇರಿಯಾ, ಮಾವ ಮರಿಯಾದಾಸ್ ರವರುಗಳೊಂದಿಗೆ ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಬಂದಿದ್ದ, ಆ ಸಮಯದಲ್ಲಿ ಜೆನಿಲಾ ಜೋಬಿ ಪ್ರಜ್ಞಾಹೀನಾ ಸ್ಥಿತಿಯಲ್ಲಿದ್ದಳು ಆಕೆಯೊಂದಿಗೆ ಬಂದವರನ್ನು ಹಿನ್ನೆಲೆ ಬಗ್ಗೆ ಕೇಳಲಾಗಿ ಅವರು ಹೇಳಿರುವುದಿಲ್ಲ. ಸದರಿಯವರನ್ನು ತಪಾಸಣೆ ಮಾಡಿ ನೋಡಲಾಗಿ ಈ ಕೆಳಕಂಡ ಗಾಯಗಳು ಕಂಡು ಬಂದವು.

    1. ದೇಹದ ಎಲ್ಲಾ ಕಡೆ ಹಲವಾರು ಕಟ್ ಗಾಯ ಆಗಿದ್ದವು, ಅವುಗಳಿಂದ ರಕ್ತಸ್ರಾವ ಇತ್ತು.

3. ಸದರಿಯವರು ನಮ್ಮ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಟ್ಟು ಹೆಚ್ಚಿನ ಚಿಕಿತ್ಸೆಗಾಗಿ ಕಳುಹಿಸಿಕೊಟ್ಟಿದ್ದು, ಗಾಯಳುವನ್ನು ಮಣಿಪಾಲ್ ಆಸ್ಪತ್ರೆ ಬೆಂಗಳೂರು ಕಳುಹಿಸಲಾಗಿದೆ. ಮಾರ್ಗ ಮಧ್ಯದಲ್ಲಿ ತೀರಿಕೊಂಡಿರುತ್ತಾರೆ. ಮಣಿಪಾಲ್ ಆಸ್ಪತ್ರೆಯಲ್ಲಿ ಆಕೆ ಸತ್ತಿರುವ ವಿಷಯ ಕನ್ಫರ್ಮ್ ಮಾಡಿದ್ದು, ಪುನಃ ಮೃತ ದೇಹವನ್ನು ನಮ್ಮ ಆಸ್ಪತ್ರೆಗೆ ಕರೆ ತರಲಾಯಿತು. ನಾವು Brought Death ಎಂದು ನೊಂದಣಿ ಮಾಡಿಕೊಂಡು ಮೃತ ದೇಹವನ್ನು ಪೋಲಿಸರಿಗೆ ಹಸ್ತಾಂತರಿಸಿರುತ್ತೇವೆ. ಈ ಕುರಿತು ಎಂ ಎಲ್ ಸಿ ಇಂಟಿಮೇಷನ್ ಹಾಜರುಪಡಿಸಿದ್ದು, ಅದನ್ನು ನಿಪಿ-38 ಎಂದು, ಎಂ ಎಲ್ ಸಿ

ರಿಜಿಸ್ಟರ್ ಎಕ್ಸಟ್ರ್ಯಾಕ್ಟ್ ಹಾಜರುಪಡಿಸಿದ್ದು, ಅದನ್ನು ನಿಪಿ-39 ಎಂದು, ಡಾಕ್ಟರ್ ನೋಟ್ ಹಾಜರುಪಡಿಸಿದ್ದು, ಅದನ್ನು ನಿಪಿ-40 ಎಂದು, ಲ್ಯಾಬ್ ರೀಪೋರ್ಟ್ ನಿಪಿ-41 ಎಂದು, ಕಾಸ್ ಅಫ್ ಡೆತ್ (Cause of death medical certificate) ನ್ನು ನಿಪಿ-42 ಎಂದು ಗುರುತಿಸಲಾಗಿದೆ. ಮೃತ ದೇಹವನ್ನು ನಮ್ಮ ಆಸ್ಪತ್ರೆಗೆ ತಂದ ನಂತರ ನಿಪಿ-38 ಹಾಗೂ 42 ರಲ್ಲಿ ಹಲ್ಲೆಯ ಹಿನ್ನಲೆ ಬಗ್ಗೆ ಆಕೆಯ ಮಾವನಿಂದ ತಿಳಿದು ಬಂದಿದ್ದರಿಂದ ದಾಖಲೆಯಲ್ಲಿ ನಮೂದು ಮಾಡಿರುತ್ತೇನೆ.

4. ನಿಪಿ-38 ರಿಂದ ನಿಪಿ-41 ರ ಮೂಲ ದಾಖಲೆಗಳನ್ನು ಸಾಕ್ಷಿ ತಂದು ಹಾಜರುಪಡಿಸಿರುತ್ತಾರೆ, ಮೂಲ ದಾಖಲೆಗಳು ಅಂತಿಮ ವರದಿಯಲ್ಲಿ ಇಲ್ಲದೇ ಇರುವುದರಿಂದ ಸಾಕ್ಷಿ ತಂದು ಹಾಜರುಪಡಿಸಿರುತ್ತಾರೆ.

5. ದಿನಾಂಕ 11.04.2023 ರಂದು ರಾತ್ರಿ 11-45 ಗಂಟೆ ಸಮಯಕ್ಕೆ ಮತ್ತೈ ಜೆನಿಲಾ ಜೋಬಿ ರವರು, ಆಕೆಯ ಗಂಡ ಶ್ಯಾಮ್ ಮರಿಯಾದಾಸ್, ಅತ್ತೆ ಶೇಲಿನ್ ಮೇರಿಯಾ, ಮಾವ ಮರಿಯಾದಾಸ್ ರವರುಗಳು ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಬಂದಿದ್ದು, ಆ ಸಮಯದಲ್ಲಿ ಜೆನಿಲಾ ಜೋಬಿ ಪ್ರಜ್ಞಾಹೀನಾ ಸ್ಥಿತಿಯಲ್ಲಿದ್ದಳು ಆಕೆಯೊಂದಿಗೆ ಬಂದವರನ್ನು ಹಿನ್ನೆಲೆ ಬಗ್ಗೆ ಕೇಳಲಾಗಿ ಅವರು ಹೇಳಿರುವುದಿಲ್ಲ. ಆರೋಪಿ ಶ್ಯಾಮ್ ಮರಿಯಾ ದಾಸ್ ರವರನ್ನು ತಪಾಸಣೆ ಮಾಡಿ ನೋಡಲಾಗಿ ಈ ಕೆಳಕಂಡ ಗಾಯಗಳು ಕಂಡು ಬಂದವು.

    1. ತಲೆಯಲ್ಲಿ ಚಿಕ್ಕ ಹರಿದ ಗಾಯ, ಎಡ ಮುಂಗೈ ಮೇಲೆ ಇತ್ತು. ಯಾವುದೇ ಇತರೆ ಗಾಯಗಳು ದೇಹದಲ್ಲಿ ಕಂಡುಬಂದಿರುವುದಿಲ್ಲ.

6. ಸದರಿಯವರಿಗೆ ನಮ್ಮ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಟ್ಟು ಹೊಲಿಗೆ ಹಾಗೂ ಡ್ರೆಸಿಂಗ್ ಮಾಡಲಾಗಿತ್ತು.

7. ಈ ಕುರಿತು ಎಂ ಎಲ್ ಸಿ ಇಂಟಿಮೇಷನ್ ಹಾಜರುಪಡಿಸಿದ್ದು, ಅದನ್ನು ನಿಪಿ-43 ಎಂದು, ಎಂ ಎಲ್ ಸಿ ರಿಜಿಸ್ಟರ್ ಎಕ್ಸಟ್ರ್ಯಾಕ್ಟ್ ಹಾಜರುಪಡಿಸಿದ್ದು, ಅದನ್ನು ನಿಪಿ-44 ಎಂದು, ಡಾಕ್ಟರ್ ನೋಟ್ ಹಾಜರುಪಡಿಸಿದ್ದು, ಅದನ್ನು ನಿಪಿ-45 ಎಂದು ಗುರುತಿಸಲಾಗಿದೆ.

8. ನಿಪಿ-43 ರಿಂದ ನಿಪಿ-45 ರ ಮೂಲ ದಾಖಲೆಗಳನ್ನು ಸಾಕ್ಷಿ ತಂದು ಹಾಜರುಪಡಿಸಿರುತ್ತಾರೆ, ಮೂಲ ದಾಖಲೆಗಳು ಅಂತಿಮ ವರದಿಯಲ್ಲಿ ಇಲ್ಲದೇ ಇರುವುದರಿಂದ ಅವುಗಳನ್ನು ಸಾಕ್ಷಿ ತಂದು ಹಾಜರುಪಡಿಸಿರುತ್ತಾರೆ.

9. ದಿನಾಂಕ 11.04.2023 ರಂದು ರಾತ್ರಿ 11-45 ಗಂಟೆ ಸಮಯಕ್ಕೆ ಮತ್ತೈ ಜೆನಿಲಾ ಜೋಬಿ ರವರು ಆಕೆಯ ಗಂಡ ಶಾಮ್ ಮರಿಯಾದಾಸ್, ಅತ್ತೆ ಶೇಲಿನ್ ಮೇರಿಯಾ, ಮಾವ ಮರಿಯಾದಾಸ್ ರವರುಗಳು ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಬಂದಿದ್ದ, ಆ ಸಮಯದಲ್ಲಿ ಜೆನಿಲಾ ಜೋಬಿ ಪ್ರಜ್ಞಾ ಹೀನಾ ಸ್ಥಿತಿಯಲ್ಲಿದ್ದಳು ಆಕೆಯೊಂದಿಗೆ ಬಂದವರನ್ನು ಹಿನ್ನೆಲೆ ಬಗ್ಗೆ ಕೇಳಲಾಗಿ ಅವರು ಹೇಳಿರುವುದಿಲ್ಲ. ಚಾಸ-2 ಮರಿಯಾದಾಸ್ ರವರನ್ನು ತಪಾಸಣೆ ಮಾಡಿ ನೋಡಲಾಗಿ ಈ ಕೆಳಕಂಡ ಗಾಯಗಳು ಕಂಡು ಬಂದವು.

    1. ತಲೆಯ ಹಿಂಭಾಗ ಮತ್ತು ಮುಖದ ಮೇಲೆ ಹರಿದ ಗಾಯ ಇತ್ತು.

10. ಸದರಿಯವರು ನಮ್ಮ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಟ್ಟಿರುತ್ತೇವೆ.

11. ಈ ಕುರಿತು ಎಂ ಎಲ್ ಸಿ ಇಂಟಿ ಮೇಷನ್ ಅದನ್ನು ನಿಪಿ-46 ಎಂದು, ಎಂ ಎಲ್ ಸಿ ರಿಜಿಸ್ಟರ್ ಹಾಜರುಪಡಿಸಿದ್ದು, ಅದನ್ನು ನಿಪಿ-47 ಎಂದು, ಡಾಕ್ಟರ್ ನೋಟ್ ಹಾಜರುಪಡಿಸಿದ್ದು, ಅದನ್ನು ನಿಪಿ-48 ಎಂದು, ಗಾಯದ ಪ್ರಮಾಣ ಪತ್ರ ನಿಪಿ-49 ಎಂದು ಗುರುತಿಸಲಾಗಿದೆ.

12. ನಿಪಿ-46 ರಿಂದ ನಿಪಿ-48 ರ ಮೂಲ ದಾಖಲೆಗಳನ್ನು ಸಾಕ್ಷಿ ತಂದು ಹಾಜರುಪಡಿಸಿರುತ್ತಾರೆ, ಮೂಲ ದಾಖಲೆಗಳು ಅಂತಿಮ ವರದಿಯಲ್ಲಿ ಇಲ್ಲದೇ ಇರುವುದರಿಂದ ಅವುಗಳನ್ನು ಸಾಕ್ಷಿ ತಂದು ಹಾಜರುಪಡಿಸಿರುತ್ತಾರೆ.

13. ದಿನಾಂಕ 11.04.2023 ರಂದು ರಾತ್ರಿ 11-45 ಗಂಟೆ ಸಮಯಕ್ಕೆ ಮತ್ತೈ ಜೆನಿಲಾ ಜೋಬಿ ರವರು ಆಕೆಯ ಗಂಡ ಶಾಮ್ ಮರಿಯಾದಾಸ್, ಅತ್ತೆ ಶೇಲಿನ್ ಮೇರಿಯಾ, ಮಾವ ಮರಿಯಾದಾಸ್ ರವರುಗಳು ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಬಂದಿದ್ದ, ಆ ಸಮಯದಲ್ಲಿ ಜೆನಿಲಾ ಜೋಬಿ ಪ್ರಜ್ಞಾ ಹೀನಾ ಸ್ಥಿತಿಯಲ್ಲಿದ್ದಳು ಆಕೆಯೊಂದಿಗೆ ಬಂದವರನ್ನು ಹಿನ್ನೆಲೆ ಬಗ್ಗೆ ಕೇಳಲಾಗಿ ಅವರು ಹೇಳಿರುವುದಿಲ್ಲ.

ಚಾಸ-3 ಶೇಲಿನ್ ಮೇರಿಯಾ ರವರನ್ನು ತಪಾಸಣೆ ಮಾಡಿ ನೋಡಲಾಗಿ ಈ ಕೆಳಕಂಡ ಗಾಯಗಳು ಕಂಡು ಬಂದವು.

1. ಎಡ ಕೈ ಹಾಗೂ ಮುಂಗೈ ಮೇಲೆ ಕಟ್ ಆಗಿರು ಗಾಯ ಇತ್ತು.

14. ಸದರಿಯವರು ನಮ್ಮ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಟ್ಟಿರುತ್ತೇವೆ. ಸದರಿಯವರಿಗೆ ಹೊಲಿಗೆ ಹಾಗೂ ಡ್ರೆಸಿಂಗ್ ಮಾಡಲಾಯಿತು.

15. ಈ ಕುರಿತು ಎಂ ಎಲ್ ಸಿ ಇಂಟಿ ಮೇಷನ್ ಹಾಜರುವುದ್ದು ಅದನ್ನು ನಿಪಿ-50 ಎಂದು, ಎಂ ಎಲ್ ಸಿ ರಿಜಿಸ್ಟರ್ ಎಕ್ಸ್‌ಟ್ರ್ಯಾಕ್ಟ್ ಹಾಜರುಪಡಿಸಿದ್ದು, ಅದನ್ನು ನಿಪಿ-51 ಎಂದು, ಡಾಕ್ಟರ್ ನೋಟ್ ಹಾಜರುಪಡಿಸಿದ್ದು, ಅದನ್ನು ನಿಪಿ-52 ಎಂದು, ಗಾಯದ ಪ್ರಮಾಣ ಪತ್ರ ನಿಪಿ-53 ಎಂದು ಗುರುತಿಸಲಾಗಿದೆ.

16. ನಿಪಿ-50 ರಿಂದ ನಿಪಿ-52 ರ ಮೂಲ ದಾಖಲೆಗಳನ್ನು ಸಾಕ್ಷಿ ತಂದು ಹಾಜರುಪಡಿಸಿರುತ್ತಾರೆ, ಮೂಲ ದಾಖಲೆಗಳು ಅಂತಿಮ ವರದಿಯಲ್ಲಿ ಇಲ್ಲದೇ ಇರುವುದರಿಂದ ಅವುಗಳನ್ನು ಸಾಕ್ಷಿ ತಂದು ಹಾಜರುಪಡಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಕಾಲವಕಾಶ ನೀಡಲಾಗಿದೆ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ನಿರ್ಮಲ ಕೆ.)
4ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದೊಡ್ಡಬಳ್ಳಾಪುರ.